# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ 0816–2272280

**email : tudatmk2009@yahoo.co.in, website : tuda.co.in.**

ಕ್ರಮಾಂಕ ಟಿಯುಡಿಎ/ಶೆ.ವ.ಬ/ಮಳಿಗೆ ಹರಾಜು/03/2017-18 ದಿನಾಂಕ

**ದಿನಾಂಕ 27-10-2017 ರ ಬೆಳಗ್ಗೆ 12:00 ಗಂಟೆಗೆ ನಡೆಯುವ ಬಹಿರಂಗ ಹರಾಜು ಪ್ರಕಟಣೆ ಸಂಬಂಧ.**

(ಸಾಮಾನ್ಯ ವರ್ಗ /ಪರಿಶಿಷ್ಟ ಪಂಗಡ/ ಪರಿಶಿಷ್ಟ ಜಾತಿ ಜನಾಂಗದವರಿಗೆ ಮೀಸಲಿಡಲಾಗಿದೆ)

| ಕ್ರ.ಸಂ | ಮಳಿಗೆ ಸಂಖ್ಯೆಗಳು | ಅಳತೆ | | ವಿಸ್ತೀರ್ಣ ಚ.ಮೀ.ಗಳಲ್ಲಿ | ಕನಿಷ್ಠ ಮಾಸಿಕ ಪ್ರೀಮಿಯಂ ರೂ. | ಪಾವತಿಸಬೇಕಾದ ಠೇವಣಿ ಮೊಬಲಗು |
|---|---|---|---|---|---|---|
| | | ಉದ್ದ | ಅಗಲ | | | |
| 1 | 02 (ಪ. ಜಾ/ಪ.ಪಂ) | 4.50 | 3.10 | 13.95 | 3,000 | 1,25,000 |
| 2 | 20 (ಪ. ಜಾ/ಪ.ಪಂ) | 4.50 | 3.10 | 13.95 | 2,000 | 75,000 |
| 3 | 08 (ಸಾಮಾನ್ಯ ವರ್ಗ) | 4.50 | 3.10 | 13.95 | 3,000 | 1,00,000 |

## ಅರ್ಹತೆಗಳು

1. ಹರಾಜಿನಲ್ಲಿ ಭಾಗವಹಿಸುವವರು ನಿಗಧಿತ ಅರ್ಜಿಯೊಂದಿಗೆ ರೂ. **5,000/-**ಗಳನ್ನು ನಗದು / ಡಿ.ಡಿ. ರೂಪದಲ್ಲಿ ದಿನಾಂಕ **27-10-2017** ರಂದು ಬೆಳಗ್ಗೆ **12:00** ಗಂಟೆಯೊಳಗಾಗಿ ಹರಾಜು ಸ್ಥಳದಲ್ಲಿ ತೆರೆಯುವ ಕೌಂಟರ್‌ನಲ್ಲಿ ಪಾವತಿಸಿ ಟೋಕನ್ ಪಡೆದಿರಬೇಕು. ಟೋಕನ್ ಪಡೆಯಲು ಇತ್ತೀಚಿನ ಭಾವಚಿತ್ರದ 2 ಪ್ರತಿಗಳು ಮತ್ತು ವಿಳಾಸ ದೃಢೀಕರಿಸುವ ಭಾವಚಿತ್ರವುಳ್ಳ ಸರ್ಕಾರಿ ದಾಖಲೆ / ಗುರುತಿನ ಚೀಟಿ ಹಾಗೂ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಿರಬೇಕು.
2. ಒಂದಕ್ಕಿಂತ ಹೆಚ್ಚಿನ ಅಂಗಡಿ ಮಳಿಗೆಗಳನ್ನು ಪಡೆಯಲು ಇಚ್ಛಿಸುವವರು ಪ್ರತಿ ಮಳಿಗೆಗೆ ರೂ. **5,000/-** ರಂತೆ ಪ್ರತೇಕವಾಗಿ ಠೇವಣಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು.
3. ಹರಾಜಿಗೆ ಟೋಕನ್ ಪಡೆದವರು ಮಳಿಗೆಯ ಮಾಸಿಕ ಪ್ರೀಮಿಯಂ ನಿಲ್ಲುವವರೆಗೆ ಎಲ್ಲಾ ಮಳಿಗೆಯ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

## ಷರತ್ತುಗಳು

1. ಬಹಿರಂಗ ಹರಾಜನ್ನು ಸ್ಥಳದಲ್ಲಿಯೇ ಆಯುಕ್ತರಿಂದ ಅಥವಾ ಅವರಿಂದ ಅಧಿಕಾರ ಪಡೆದವರಿಂದ ಹರಾಜು ಮಾಡಲಾಗುವುದು.
2. ವಾಣಿಜ್ಯ ಮಳಿಗೆಗಳ ಅತ್ಯಂತ ಹೆಚ್ಚಿನ ಬಿಡ್ಡುದಾರರು ಬಿಡ್ ಮೊಬಲಗಿನ 10 ತಿಂಗಳ ಮೊಬಲಗನ್ನು ಹರಾಜು ದಿನದಂದೇ ಪಾವತಿ ಮಾಡಬೇಕು. ವಿಫಲವಾದಲ್ಲಿ ಟೋಕನ್ ಮೊಬಲಗು ರೂ. **5,000/–** ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಬಿಡ್ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಆಯುಕ್ತರು/ ಬಿಡ್ ಅಧಿಕಾರಿಗೆ ಸೇರಿರುತ್ತದೆ. ಈ ರೀತಿ ಒಪ್ಪಿದ ಬಿಡ್ ಪ್ರಾಧಿಕಾರದ ಸಭೆಯ ಸ್ಥಿರೀಕರಣಕ್ಕೊಳಪಟ್ಟಿರುತ್ತದೆ. ಸ್ಥಿರೀಕರಣದ ನಂತರ ನೀಡಲಾಗುವ ಹಣ ಪಾವತಿ ತಿಳುವಳಿಕೆ ಸ್ವೀಕರಿಸಿದ 15 ದಿನಗಳ ಒಳಗಾಗಿ ಠೇವಣಿ ಮೊಬಲಗನ್ನು ಪಾವತಿಸದಿದ್ದಲ್ಲಿ ಟೋಕನ್ ಮೊಬಲಗು ಮತ್ತು 10 ತಿಂಗಳ ಮುಂಗಡ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರಿಗೆ ಮೀಸಲಿಟ್ಟ ಮಳಿಗೆಗಳು ಬಿಡ್ ಆಗದೇ ಉಳಿದಲ್ಲಿ ಮಳಿಗೆಗಳನ್ನು ಸಾಮಾನ್ಯ ವರ್ಗದವರಿಗೆ ಹಂಚಿಕೆ ಮಾಡಲಾಗುವುದು.
5. ಅವಧಿ ವಾಣಿಜ್ಯ ಮಳಿಗೆಯನ್ನು ಅಂಗೀಕೃತ ಬಿಡ್ ಪ್ರೀಮಿಯಂ ಮೊಬಲಗಿನ ವಾರ್ಷಿಕ ಶೇ.10ರಷ್ಟು ಹೆಚ್ಚಳಕ್ಕೆ ಒಳಪಟ್ಟು **12 ವರ್ಷಗಳ ಅವಧಿಗೆ** ಮಾಸಿಕ ಪ್ರೀಮಿಯಂ ಪಾವತಿ ಆಧಾರದ ಮೇಲೆ ಮುಂದುವರೆಯಲು ಅವಕಾಶ ಕಲ್ಪಿಸಲಾಗುವುದು.
6. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದೊಂದಿಗೆ ಮಾಡಿಕೊಳ್ಳಲಾಗುವ ಒಪ್ಪಂದ ಪತ್ರವನ್ನು ಪ್ರೀಮಿಯಂದಾರರ ಖರ್ಚಿನಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಡತಕ್ಕದ್ದು, ಮಾದರಿ ಒಪ್ಪಂದ ಪತ್ರವನ್ನು ಸೂಚನಾ ಫಲಕದಲ್ಲಿ ಬಿತ್ತರಿಸಲಾಗಿದೆ.

ಆಯುಕ್ತರು, 22/09/17

ನಗರಾಭಿವೃದ್ಧಿ ಪ್ರಾಧಿಕಾರ,

ತುಮಕೂರು.

-2-

7. ಠೇವಣಿ ಮಳಿಗೆ ಸಂಖ್ಯೆ 02, ಕ್ಕೆ ರೂ. **1,25,000/-** ಮಳಿಗೆ ಸಂಖ್ಯೆ ಮಳಿಗೆ ಸಂಖ್ಯೆ 20 ಕ್ಕೆ ರೂ. **75,000/-** ಹಾಗೂ ಮಳಿಗೆ ಸಂಖ್ಯೆ 08 ಕ್ಕೆ ರೂ. **1,00,000/-** ಗಳನ್ನು ಬಡ್ಡಿ ರಹಿತ ಮರುಪಾವತಿ ಠೇವಣಿಯಾಗಿ ಪಾವತಿಸತಕ್ಕದ್ದು.
8. ಹೊರದಾರಿ ಮಾಸಿಕ ಪ್ರೀಮಿಯಂದಾರರು ಪ್ರೀಮಿಯಂ ಅವಧಿ ಪೂರ್ಣಗೊಳ್ಳುವ ಮೊದಲೇ ಮಳಿಗೆಯನ್ನು ತೆರವುಗೊಳಿಸಲು ಇಚ್ಛಿಸಿದಲ್ಲಿ ಮರುಪಾವತಿ ಠೇವಣಿ ಮೊಬಲಗನ್ನು ಈ ಕೆಳಕಂಡಂತೆ ಪಾವತಿಸಲಾಗುವುದು.

| ಕ್ರಸಂ | ಅವಧಿ | ಠೇವಣಿ ಮೊಬಲಗಿನಲ್ಲಿ ಕಟಾಯಿಸಲಾಗುವ ಶೇಕಡ ಪ್ರಮಾಣ |
|---|---|---|
| 1 | 1 ರಿಂದ 3 ವರ್ಷದ ಒಳಗೆ | 50 |
| 2 | 3 ರಿಂದ 6 ವರ್ಷದ ಒಳಗೆ | 30 |
| 3 | 6 ರಿಂದ 9 ವರ್ಷದ ಒಳಗೆ | 20 |
| 4 | 9 ರಿಂದ 12 ವರ್ಷದ ಒಳಗೆ | 10 |

9. ಬಹಿರಂಗ ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಪಾವತಿಸಿದ ಟೋಕನ್ ಮೊಬಲಗನ್ನು ಹರಾಜು ದಿನದಂದೇ ಹಿಂದಿರುಗಿಸಲಾಗುವುದು.
10. ಅಂಗಡಿ ಮಳಿಗೆಗಳಲ್ಲಿ ಕಾನೂನು ಬಾಹಿರ ವಹಿವಾಟು ನಡೆಸಬಾರದು. ವಹಿವಾಟು ಪ್ರಾರಂಭಿಸುವ ಮುನ್ನಾ ಸ್ಥಳೀಯ ಸಂಸ್ಥೆಯಾದ ನಗರಸಭೆ ತುಮಕೂರು / ಸಕ್ಷಮ ಪ್ರಾಧಿಕಾರದಿಂದ ಕಾನೂನು ಪ್ರಕಾರ ಪರವಾನಗಿ ಪಡೆದು ಮಳಿಗೆ ಉಪಯೋಗಿಸತಕ್ಕದ್ದು.
11. ಮಂಜೂರಾದ ಮಳಿಗೆಗಳ ಮೇಲೆ ಹೆಚ್ಚುವರಿ ಕಟ್ಟಡ ಕಟ್ಟುವ ಹಕ್ಕನ್ನು ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ. ಈ ಬಗ್ಗೆ ಪ್ರೀಮಿಯಂದಾರರು ಯಾವುದೇ ತಂಟೆ ತಕರಾರು ಮಾಡಲು ಅವಕಾಶವಿರುವುದಿಲ್ಲ.
12. ಮಳಿಗೆಗೆ ಮಾಹೆಯಾನ ವಿದ್ಯುಚ್ಛಕ್ತಿ ಶುಲ್ಕವನ್ನು, ಇತರೇ ಸರ್ಕಾರದ ಶುಲ್ಕಗಳು, ಉದ್ದಿಮೆ ಶುಲ್ಕ ಮತ್ತು ಇತರೇ ನಿರ್ವಹಣಾ ವೆಚ್ಚ ಮುಂತಾದವುಗಳನ್ನು ಪ್ರೀಮಿಯಂದಾರರು ಪಾವತಿಸತಕ್ಕದ್ದು.
13. ದಂಡ ಪ್ರೀಮಿಯಂದಾರರು ಮಾಸಿಕ ಪ್ರೀಮಿಯಂ ಮೊತ್ತವನ್ನು ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಪಾವತಿಸತಕ್ಕದ್ದು. ತಪ್ಪಿದಲ್ಲಿ ವಿಳಂಭಿತ ಅವಧಿಗೆ ಸಾಲಿಯಾನ ಶೇಕಡ 24 ರಷ್ಟು ಬಡ್ಡಿ ವಿಧಿಸಿ ವಸೂಲಿ ಮಾಡಲಾಗುವುದು. ಒಂದು ವೇಳೆ ಪ್ರೀಮಿಯಂ ಮೊತ್ತವನ್ನು ನಿರಂತರವಾಗಿ 6 ತಿಂಗಳ ಕಾಲ ಪಾವತಿಸದಿದ್ದಲ್ಲಿ ಮಳಿಗೆಯ ಕರಾರು ಪತ್ರವನ್ನು ವಜಾ ಮಾಡಲಾಗುವುದು ಹಾಗೂ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
14. ವರ್ಗಾವಣೆ ಗುತ್ತಿಗೆದಾರರು ಮರಣ ಹೊಂದಿದ್ದಲ್ಲಿ ವಾರಸುದಾರರ ಸದಸ್ಯರು ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ಕುಟುಂಬದ ಒಪ್ಪಿಗೆಯ ಮೇರೆಗೆ ಕುಟುಂಬದಲ್ಲಿರುವ ಒಬ್ಬರ ಹೆಸರಿಗೆ ವರ್ಗಾವಣೆಯ ಕ್ರಮವನ್ನು ಒಪ್ಪಿರುತ್ತೇನೆ. ಗುತ್ತಿಗೆದಾರರು ಅನಾರೋಗ್ಯದಿಂದ ಮಳಿಗೆಯನ್ನು ನಡೆಸಲು ಸಾಧ್ಯವಾಗದಿದ್ದಲ್ಲಿ ಗುತ್ತಿಗೆದಾರರಿಂದ ಒಪ್ಪಿಗೆ ಪಡೆದು ಕರಾರು ಪತ್ರವನ್ನು ಕುಟುಂಬದ ಸದಸ್ಯರಾದ ಪತ್ನಿ ಅಥವಾ ಮಕ್ಕಳ ಹೆಸರಿಗೆ ವರ್ಗಾಯಿಸಬಹುದಾಗಿರುತ್ತದೆ.
15. ಗುತ್ತಿಗೆದಾರರು ಮಳಿಗೆಯನ್ನು ಮರು ಗುತ್ತಿಗೆಗೆ ನೀಡಿದಲ್ಲಿ, ಯಾವುದೇ ತಿಳುವಳಿಕೆ ನೀಡದೆ, ಕರಾರು ಪತ್ರವನ್ನು ರದ್ದುಗೊಳಿಸಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಕ್ರಮಕೈಗೊಳ್ಳಲಾಗುವುದು.
16. ಪ್ರೀಮಿಯಂದಾರರು ಕಾಲಾನುಕಾಲಕ್ಕೆ ಜಾರಿಯಾಗಬಹುದಾದ ಸರ್ಕಾರ / ಪ್ರಾಧಿಕಾರದ ತೀರ್ಮಾನಗಳಿಗೆ ಬದ್ಧರಾಗಿರತಕ್ಕದ್ದು.
17. ಪ್ರಾಧಿಕಾರದ ನಿಯೋಜಿತ ಸಿಬ್ಬಂದಿ ಯಾವುದೇ ಸಂದರ್ಭದಲ್ಲಿ ಮಳಿಗೆಗಳನ್ನು ವ್ಯಾಪಾರ / ಚಟುವಟಿಕೆಗಳನ್ನು ಪರಿಶೀಲಿಸಿ / ವೀಕ್ಷಿಸಲು ಅಧಿಕಾರ ಹೊಂದಿರುತ್ತಾರೆ.
18. ಮೇಲ್ಕಂಡ ಷರತ್ತುಗಳಲ್ಲಿ ಯಾವುದೇ ಷರತ್ತನ್ನು ರದ್ದುಪಡಿಸುವ / ಸೇರ್ಪಡೆಗೊಳಿಸುವ / ಮಾರ್ಪಡಿಸುವ ಹಕ್ಕನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು / ಸರ್ಕಾರ ಹೊಂದಿರುತ್ತದೆ.

ಸಹಿ/-
ಡಾ. ರಫೀಕ್ ಅಹ್ಮದ್ .ಎಸ್.
ಅಧ್ಯಕ್ಷರು, ನಗರಾಭಿವೃದ್ದಿ ಪ್ರಾಧಿಕಾರ,
ತುಮಕೂರು

ಸಹಿ/-
(ಬಿ.ಟಿ.ರಂಗಸ್ವಾಮಿ) ಕೆ.ಎಂ.ಎ.ಎಸ್.,
ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

21/09/17
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.